ಕುಳಿತಳು. ಸೊಸೆ ಆಗಲೇ ಬುತ್ತಿಗಂಟು ಕಟ್ಟಿ ಆಗಿತ್ತು.

ಈಗಲಾದರೂ ಮಗ ಸೊಸೆಗೆ ತನ್ನ ಅತ್ತೆ, ತನ್ನ ತಾಯಿ, ತನ್ನ ಮನೆ ಎಂಬ ಜವಾಬ್ದಾರಿ ಬಂದಿತಲ್ಲ! ಎಂದು ಹುರುಪಿನಿಂದಲೇ ಎದ್ದು ಸಾವಕ್ಕ ಗಾಡಿದಡಿ ಅಂಚಿನ ಇಳಕಲ್ಲ ಸೀರೆ ಉಟ್ಟಳು. ದೇವರ ಮುಂದೆ ದೀಪ ಹಚ್ಚಿದಳು. ಹೊರಬಂದು ನೋಡುತ್ತಾಳೆ ಮಗ ಆಗಲೇ ಎತ್ತಿನ ಬಂಡಿ ಹೂಡಿದ್ದ. ಅಮ್ಮನಿಗೆ ಕೂಡಲು ಬಂಡಿಯಲ್ಲಿ ಕಂಬಳಿ ಹಾಕಿದ್ದ. ನೆರಳು ಇರಲೆಂದು ಛತ್ರಿ ಕಟ್ಟಿದ್ದ. ಶಾಂತವ್ವ ಬಂದು ಬುತ್ತಿಗಂಟು ಗಾಡಿಯಲ್ಲಿ ತಂದಿಟ್ಟಳು. ಕೈ ಹಿಡಿದು ಅತ್ತೆಯನ್ನು ಗಾಡಿ ಹತ್ತಿಸಿದಳು. ಬಂಡಿ ಹೊರಟಿತು. ಸ್ವತಃ ಪರಮನೇ ಬಂಡಿ ಓಡಿಸತೊಡಗಿದ. ಬಂಡಿ ಮುಂದೆ ಮುಂದೆ ಹೊರಟಿತು. ಮನೆ ಊರು ದೂರ ಹಿಂದೆ ಹಿಂದೆ ಉಳಿಯಿತು. ಸಾವಕ್ಕನ ಮನಸ್ಸಿನಲ್ಲಿ ಏನೋ ತಳಮಳ !

***

ಹೊಲ ಬಂದಿತು. ಗಾಡಿ ನಿಲ್ಲಿಸಿದ ಪರಮ ಅಮ್ಮನನ್ನು ಕೈ ಹಿಡಿದು ಕೆಳಗೆ ಇಳಿಸಿಕೊಂಡ. ಸಾವಕ್ಕ ಖುಷಿಯಿಂದ ಮಗ ಸೊಸೆ ಜೊತೆ ಇಡೀ ಹೊಲದ ತುಂಬ ಓಡಾಡಿದಳು. ಅಲಸಂದಿ ಕಾಯಿ ಕಿತ್ತು ತಂದಳು. ಪರಮನಿಗೆ ಎಳೇ ಅಲಸಂದಿ ಮೂಕಣಿ ಉಸಳಿ ತುಂಬಾ ಇಷ್ಟವಾದ್ದರಿಂದ ಮಾಡಿ ಬಡಿಸುವ ಆಸೆ ಸಾವಕ್ಕನಿಗೆ! ಆದರೆ ಪರಮನ ಆಸೆಯೇ ಬೇರೆ, ಅದು ಸಾವಕ್ಕನಿಗೆ ಗೊತ್ತಾಗಲಿಲ್ಲ.

ತಾಯಿ ಮಗ ಸೊಸೆ ಊಟಕ್ಕೆ ಕುಳಿತರು. ಸಾವಕ್ಕ ಸೊಸೆಯಾಗಿ ಈ ಮನೆಗೆ ಕಾಲು ಹಾಕಿದಾಗ ಮೊದಲ ಬಾರಿ ಹೊಲಕ್ಕೆ ಗಂಡನಿಗೆ ಬುತ್ತಿ ತಂದಾಗ ಒಂದು ಆಲದ ಗಿಡ ಹಚ್ಚಿದ್ದಳು. ಅದೀಗ ಮರವಾಗಿ ಬೆಳೆದಿದೆ. ಆಲದ ಮರದ ಕೆಳಗೆ ಊಟಕ್ಕೆ ಕುಳಿತಿದ್ದರು. ಆಲ ಚೆನ್ನಾಗಿ ಬೆಳೆದು ಬಿಳಲು ಬಿಟ್ಟಿದೆ. ಸಾವಕ್ಕ ತಲೆ ಎತ್ತಿ ಒಮ್ಮೆ ಆಲದ ಮರ ನೋಡಿದಳು. ಮಗ ಸೊಸೆ ಎಷ್ಟೊಂದು ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದಾರೆ. ತನ್ನ ಮನೆ ಕೂಡ ಆಲದ ಮರದ ಹಾಗೆಯೇ ವಿಶಾಲವಾಗಿ ಬೆಳೆಯಲಿ ಎಂದು ಹಾರೈಸಿದಳು.

ಸೊಸೆ ಊಟಕ್ಕೆ ನೀಡಿದಳು, ರೊಟ್ಟಿ ಬದನೆ ಕಾಯಿ ತುಂಬಗಾಯಿ ಪಲ್ಲೆ, ಮಿಟಕಿ, ಉಸಳಿ, ಶೇಂಗಾ ಚಟ್ನಿ, ಮೆಂತೆ ಸೊಪ್ಪಿನ ಉದುರು ಪಲ್ಲೆ, ಗುರೆಳ್ಳು ಚಟ್ನಿ ಮೊಸರಬುತ್ತಿ, ಸ್ವರ್ಗಕ್ಕೆ ಮೂರೇ ಗೇಣು ಎನಿಸಿತು. ಸಾವಕ್ಕ ಗಂಡನ ಪ್ರೀತಿಯನ್ನಂತೂ ಕಾಣಲಿಲ್ಲ, ಮಗನಿಗೆ ಈಗಲಾದರೂ ಬುದ್ಧಿ ಬಂದಿತಲ್ಲ ಎಂದು ಖುಷಿ ಪಟ್ಟಳು.

ತಾಯಿ ಮಗ ಹೊಟ್ಟೆ ತುಂಬ ಉಂಡರು, ನೀರು ಕುಡಿಯಲೆಂದು ನೋಡುತ್ತಾಳೆ. ಸಾವಕ್ಕನಿಗೆ ಕುಡಿಯಲು ನೀರು ಇರಲಿಲ್ಲ. 'ಅತ್ತೆವ್ವ ಒಂಚೂರು ತಡಕೊಳ್ರಿ, ನೀವು ಸ್ವತಾ ನಿಂತು ಕಡಿಸಿದ ಬಾವಿಯಿಂದ ನೀರು ತಂದು ಕೊಡತೇನಿ, ಅದಕ್ಕ ಮನ್ಯಾನು ನೀರ ತರಲಿಲ್ಲರಿ' ಎನ್ನುತ್ತ ಶಾಂತವ್ವ ಬಾವಿಗಿಳಿದಳು. 'ಲೇ ತಡಿಯ ನಾನು ನೀರೆತ್ತಿ ಕೊಡತೇನಿ. ಬಿದ್ಯಂದ್ರ ಕುತಗೊಂಡು ನಾನಂತೂ ಅಳಾವಲ್ಲ' ಎನ್ನುತ್ತ ಪರಮ ಹೆಂಡತಿಯನ್ನು ಹಿಂಬಾಲಿಸಿದ.

ಮಗ ಸೊಸೆಯ ಪ್ರೇಮದಾಟ ಇದೆಂದು ತಿಳಿದು ನಸುನಕ್ಕಳು ಸಾವಕ್ಕ.

ಮಗ ಸೊಸೆ ನೀರು ತಂದರು, ಎಡಬಲಕ್ಕೆ ಕುಳಿತು ಕುಡಿಸಿದರು. ನೀರು ಕುಡಿದಂತೆಲ್ಲ ಹೊಟ್ಟೆಯಲ್ಲಿ ಸಂಕಟ ಎನಿಸತೊಡಗಿತು. ಕಣ್ಣು ಮಂಜಾಯಿತು. ಅಡ್ಡ ಬಿದ್ದು ಗೋಣು ಚೆಲ್ಲಿದ ಸಾವಕ್ಕನ ದೇಹ ನೀಲಿಯಾಯಿತು. ಮಗ ಸೊಸೆ ಬೆರೆಸಿ ಕೊಟ್ಟ ವಿಷ ತನ್ನ ಕೆಲಸ ಮಾಡಿತ್ತು.

ವಿಜಯದ ನಗೆ ನಕ್ಕ ಪರಮ ಮತ್ತು ಶಾಂತವ್ವ, ಸಾವಕ್ಕನನ್ನು ನೆಲಕ್ಕೆ ಮಲಗಿಸಿದರು. ಪರಮ ಹೊಲವನ್ನು ತನ್ನ ಹೆಸರಿಗೆ ಮಾಡಿಕೊಂಡ ಪತ್ರಕ್ಕೆಲ್ಲ ಸಾವಕ್ಕನ ಬೆರಳು ಒತ್ತಿಕೊಂಡ. ಪರಮ ಕೂಸಾಗಿದ್ದಾಗ ಎದ್ದು ನಿಲ್ಲಲು ಪ್ರಯತ್ನಿಸಿದಾಗಲೆಲ್ಲ ಬೀಳದಂತೆ ಕೈ ಹಿಡಿದು ನಡೆಸಿದ ಕೈ ಬೆರಳು ಅದು. ಪರಮ ಬಹಳ ಖುಷಿಯಿಂದ ಎರಡೂ ಕೈ ಎತ್ತಿ ಜೋರಾಗಿ ಮೈಮುರಿದ. ಪಕ್ಕದ ಗಿಡಗಂಟೆಗಳಲ್ಲಿ ಏನೋ ಹರಿದಾಡಿತು.

'ಶಾಂತಿ, ಊರ ಮಂದಿಗೆಲ್ಲಾ ನಮ್ಮ ಮ್ಯಾಲೆ ಏನೂ ಸಂಶಯ ಬರೋದಿಲ್ಲ. ಅವ್ವಗ ಅಕಿ ಮಗ ನಿಂಗಪ್ಪ ಕಡದಾನ ಅಂತ ಹೇಳಿದ್ರಾತು. ಹಾವನ್ನ ಹಡದಾಕಿ ಕಡೀಗೂ ಅನುಭವಿಸಿದ್ಲು ಅಂತ ಎಲ್ಲಾರೂ ಮಾತಾಡಕೋತಾರ ಬಿಡು' ಎಂದು ಜೋರಾಗಿ ನಗತೊಡಗಿದ. ಜೋರಾಗಿ ಚಪ್ಪಾಳೆ ತಟ್ಟುತ್ತ ಕುಣಿಯ ತೊಡಗಿದ, ಸಾವಕ್ಕನ ದೇಹ ಕೆಳಗೆ ಬಿದ್ದಿತು. ಸುತ್ತಲೂ ಮಗ ಖುಷಿಯಿಂದ ಕುಣಿಯುತ್ತಿದ್ದ. ದೂರದಲ್ಲಿ ನಿಂತಿದ್ದ ಶಾಂತಕ್ಕ ಗೆಲುವಿನ ನಗೆ ಬೀರುತ್ತಿದ್ದಳು. ಪರಮನ ನಗು ಆಗಸ ಮುಟ್ಟಿ ಮಾರ್ದನಿಸಿತು. ಅವನಲ್ಲಿ ತುಂಬಾ ಖುಷಿ ಉಕ್ಕುತ್ತಿತ್ತು. ಏಕೆಂದರೆ ಎಲ್ಲ ಹೊಲದ ಒಡೆಯ ಅವನಾಗಿದ್ದ. ಅಲ್ಲಿಯ ಗಿಡಗಂಟೆಯಲ್ಲಿ ಅದೇನೋ ಸರ ಸರ ಸದ್ದು !

ಬುಸ್ .....

ಒಮ್ಮೆಲೇ ಪರಮನ ಎದುರಿಗೆ ಬಂದು ಹಾವು ಎದೆಯುದ್ದಕ್ಕೂ ನೇರವಾಗಿ ಎದ್ದು ನಿಂತಿತು. ಪರಮ ಗುರುತಿಸಿದ, ಬಾಯಿಯ ಬಲಕ್ಕೆ ಕಪ್ಪು ಚುಕ್ಕೆ ! ಒಮ್ಮೆಲೇ ಅಪ್ರತಿಭನಾಗಿ ಹಿಂದೆ ಸರಿದು ನಿಂತ. ಶಾಂತವ್ವನ ಎದೆ ಡವಡವನೇ ಹೊಡೆದುಕೊಳ್ಳುತ್ತಿತ್ತು.

ಒಂದಲ್ಲ, ಎರಡಲ್ಲ ಮೂರಲ್ಲ ಆರು ಹಾವುಗಳು, ಎಲ್ಲವೂ ನೇರವಾಗಿ ಬಾಲದ ತುದಿ ಮೇಲೆ ಎದ್ದು ನಿಂತಿವೆ. ಎಲ್ಲವೂ ಬುಸ್, ಬುಸ್ ಎಂದು ಕೋಪ ಪ್ರದರ್ಶಿಸುತ್ತಿವೆ. ಪರಮನ ಗಂಟಲು ಒಣಗಿತು. ಪ್ರಾಣ ಬಾಯಿಗೆ ಬಂದಂತೆನಿಸಿತು. ಉದ್ದಗೆ ನಿಂತಿದ್ದ ಹಾವೊಂದು ಮೆಲ್ಲಗೇ ಕೆಳಗಿಳಿಯಿತು, ಸಾವಕ್ಕನ ಸುತ್ತ ಬಂದು ಪ್ರದಕ್ಷಿಣೆ ಹಾಕಿತು. ಸರ್ರನೇ ಆಕೆಯ ಕಾಲಿಗೆ ಕಚ್ಚಿ ಸರಸರನೇ ಹೀರತೊಡಗಿತು. ನೋಡ ನೋಡುತ್ತಲೇ ಸಾವಕ್ಕನ ಮೈಯಲ್ಲಿ ಹರಡಿಕೊಂಡು ಆಕೆಯ ಪ್ರಾಣ ತೆಗೆಯತೊಡಗಿದ್ದ ವಿಷ ಮಾಯವಾಯಿತು. ಸಾವಕ್ಕ ಮೆಲ್ಲನೇ ಮೇಲೆದ್ದು ಕುಳಿತಳು. ವಿಷ ಹೀರಿದ ಹಾವು ಸರಸರನೇ ಮುಳ್ಳುಕಂಟಿಯೊಳಗೆ ಹೋಯಿತು. ಅದೇನೋ ಹುಲ್ಲು ಕಚ್ಚಿ ಕಚ್ಚಿ ತಿಂದು ಉಗುಳತೊಡಗಿತು. ನೋಡು ನೋಡುವಷ್ಟರಲ್ಲೇ, ಹುಲ್ಲು ಕಚ್ಚಿ ಗುಡ್ಡೆ ಹಾಕಿತು. ಅದು ನೀಲಿ ಹುಲ್ಲಿನ ಗುಡ್ಡೆ, ಸಾವಕ್ಕನ ವಿಷವನ್ನು ಹಾವಿನ ಮುಖಾಂತರ ಆ ಹುಲ್ಲು ಉಂಡು ನೀಲಿಯಾಗಿತ್ತು.

ಸಾವಕ್ಕ ಕಣ್ಣು ತಿಕ್ಕಿ ತಿಕ್ಕಿ ನೋಡುತ್ತಾಳೆ. ಪರಮನ ಹೆಂಡತಿ ಹೆದರಿ ಗಡ ಗಡ ನಡುಗುತ್ತಿದ್ದಾಳೆ. ಪರಮನ ಸುತ್ತ 5 ಹಾವುಗಳು ಬಾಲದ ತುದಿ ಮೇಲೆ ಎದ್ದು ನಿಂತು ಬುಸುಗುಡುತ್ತಿವೆ. ಪರಮ ಹೆದರಿ ನೀರಾಗಿದ್ದಾನೆ. ಎರಡನೇ ಸೊಸೆ ಅಂದರೆ ನಿಂಗಪ್ಪನ ಹೆಂಡತಿ ಅತ್ತೆಯ ಮೈಯಿಂದ ಉಂಡ ವಿಷ ಕಕ್ಕುತ್ತಿದ್ದಾಳೆ.

ಸಾವಕ್ಕನಿಗೆ ಪರಮ ಶಾಂತವ್ವನ ಮೇಲೆ ತುಂಬಾ ಸಿಟ್ಟು ಬಂತು.

'ಪರಮಾ, ನೀಚಾ ಆಸ್ತಿ ಆಶೇಕ್ಕ ಜಲಮಾ ಕೊಟಾಕಿನ್ನ ವಿಷಾ ಉಣಿಸಿ ಕೊಲ್ಲಾಕ ನೋಡತಿಯೇನೋ. ಛಲೋ ಆದ್ರಲ್ಲಾ ಅಂತ ಖುಷಿ ಪಟ್ಟಿದ್ನಲೊ, ನಿನ್ನ ಪ್ರೀತಿ ಹಿಂದ ಇಂಥಾ ಕಹಿ ತುಂಬೇತಿ, ನಿನ್ನ ಆಶಾಕ್ಕೆ ಜಲಮಾ ಕೊಟ್ಟ ತಾಯಿನ್ನ ಕೊಂದಾವ ನೀನು. ಭೂಮಿ ಮ್ಯಾಗ ಬದುಕೊ ಹಕ್ಕಿಲ್ಲ ನಿನಗ. ನಿಂಗಪ್ಪ ನಿಮ್ಮಣ್ಣನ ಮುಗಸು'. ಸ್ವತಃ ಸಾವಕ್ಕನೇ ಮಗನನ್ನು ಕೊಲ್ಲಲು ಎರಡನೇ ಮಗ ನಿಂಗಪ್ಪನಿಗೆ ಆಜ್ಞಾಪಿಸಿದಳು. ನಿಂಗಪ್ಪ ಅವನ ಪತ್ನಿ ನಾಲ್ಕು ಮಕ್ಕಳು ಎಲ್ಲರೂ ಕೂಡಿ ಪರಮನನ್ನು ಕಚ ಕಚನೇ ಕಚ್ಚಿದರು. ನೋಡ ನೋಡುವಷ್ಟರಲ್ಲಿಯೇ ಪರಮ ನೀಲಿಯಾಗಿ ಹೋದ.

ನಿಂಗಪ್ಪನ ಪರಿವಾರ ಈಗ ಶಾಂತವ್ವನತ್ತ ತಿರುಗಿತು. ಇದನ್ನು ಕಂಡ ಸಾವಕ್ಕ ಹೆದರಿ ಜೋರಾಗಿ ಚೀರಿದಳು.

ನಿಂಗಪ್ಪ ಶಾಂತವ್ವನ ಮುಟ್ಟಿದ್ಯಂದ್ರ ನನ ಮ್ಯಾಗ ಆಣಿ. ಆಕಿ ಹೊಟ್ಯಾಗ ನನ ಮೊಮ್ಮಗಾ ಅದಾನ.

ತಕ್ಷಣವೇ ನಿಂಗಪ್ಪ ಎರಡು ಹೆಜ್ಜೆ ಹಿಂದೆ ಸರಿದ, ಶಾಂತವ್ವ ತಕ್ಷಣ ಯೋಚಿಸಿದಳು. ಊರಿನತ್ತ ಓಡಿ ಹೋದಳು. ಹತ್ತು ನಿಮಿಷದಲ್ಲೇ ಕಟ್ಟಿಗೆ ಬಡಿಗೆ ಹಿಡಿದು ಊರ ಜನರೆಲ್ಲ ಬಂದರು.

'ನೋಡ್ರಿಲ್ಲೆ, ನನ್ ಗಂಡನ್ನ ಕೊಂದೈತಿ ಈ ಹಾವು. ಹೊಡಿರಿ ಅಲ್ಲೆ ಕಂಟ್ಯಾಗ ಅವ ನೋಡ್ರಿ, ಹಾಕಾಕ್ಕೊಂಡು ಹೊಡೀರಿ' ಎಂದು ಎಲ್ಲರನ್ನೂ ಹುರಿದುಂಬಿಸಿದಳು. ಜನರೆಲ್ಲ ಸಿಟ್ಟಿಗೆದ್ದು ಹಾವು ಹುಡುಕತೊಡಗಿದರು. ನಿಂಗಪ್ಪ ಸಿಕ್ಕಿಬಿದ್ದ. 'ಅವ ನನ ಮಗ ನಿಂಗಪ್ಪ ಹೊಡಿಬ್ಯಾಡ್ರಿ' ಎಂದು ಸಾವಕ್ಕ ಕೂಗಿ ಕೂಗಿ ಹೇಳಿದರೂ ಜನ ಕೇಳಲೇ ಇಲ್ಲ. ಅದನ್ನು ಕಟ್ಟಿ ಹಾಕತೊಡಗಿದರು. ತುಂಡು ತುಂಡಾಗಿ ಮಾಡಿ ಒಗೆಯಲು ಮುಗಿ ಬಿದ್ದರು. ಇದ್ದ ಬಿದ್ದ ಶಕ್ತಿಯನ್ನೆಲ್ಲ ಹಾಕಿ ಸಾವಕ್ಕ ಕೂಗಿದಳು. ನಿಂಗಪ್ಪ ಹಾರಿ ಹೋಗು ನಿಂಗಪ್ಪ ಹಾರಿ ಹೋಗು, ನಿಂಗಪ್ಪ ಅವನ ಪರಿವಾರ ಸರ್ರನೇ ಆಕಾಶಕ್ಕೆ ನೆಗೆದರು. ಜನ ಹಾರುವ ಹಾವು ಕಂಡು ಬಾಯಿ ತೆಗೆದು ಹೌಹಾರಿ ನಿಂತರು.

'ನಿಂಗಪ್ಪ ಇನ್ನೆಂದೂ ಈ ಕಡೆ ತಲೀ ಹಾಕಬ್ಯಾಡ. ದೂರ ದೂರ ಹೋಗು' ಎಂದು ಸಾವಕ್ಕ ಆಜ್ಞಾಪಿಸಿದಳು.

ಅಂದು ಹೋದ ಹಾವು ಮುಂದೆಂದೂ ನಮ್ಮ ಊರಿನಲ್ಲಿ ಕಾಣಿಸಲೇ ಇಲ್ಲ. ಮೊನ್ನೆ ಪತ್ರಿಕೆಯಲ್ಲಿ 'ಹಾರುವ ಹಾವುಗಳು ಆಫ್ರಿಕಾದ ಕಾಡಿನಲ್ಲಿ ಪತ್ತೆಯಾಗಿವೆ' ಎಂದು ವರದಿ ನೋಡಿದೆ. ಆಗ ನನಗೆ ಸಾವಕ್ಕನ ಮಗ ನಿಂಗಪ್ಪ ಆಫ್ರಿಕಾದಲ್ಲಿದ್ದಾನೆಂದು ಗೊತ್ತಾಯಿತು. ■

